**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 865/2025**

ಸರ್ಕಾರದ ಪರ
ಕೋಟಾ ಠಾಣಾ ಪೊಲೀಸರು --- ಪಿರ್ಯಾದಿದಾರರು

-ಮತ್ತು-

1. ದಿನೇಶ್ ಮೊಗವೀರ ಹಾಗೂ ಇನ್ನೊಬ್ಬರು --- ಆರೋಪಿತರು

**ಃದೋಷಾರೋಪಣೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್, ಬಿ.ಎ., ಎಲ್ಎಲ್.ಬಿ., 1ನಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ**

1. ದಿನೇಶ್ ಮೊಗವೀರ,36 ವರ್ಷ,
ತಂದೆಃ ಮುತ್ತು ನಾಯ್ಕ,
ವಾಸಃ ಮಾವಿನಕೊಡ್ಲು,
ಮಂಜೂರು ಕುಳಂಜೆ ಗ್ರಾಮ,
ಕುಂದಾಪುರ ತಾಲೂಕು.

2. ಶ್ರೀಧರ,33 ವರ್ಷ,
ತಂದೆಃ ವೀರ,
ವಾಸಃ ಮಾಚೆನಾಡಿ, ಕಕ್ಕುಂಜೆ ಗ್ರಾಮ,
ಬ್ರಹ್ಮಾವರ ತಾಲೂಕು. --- ಆರೋಪಿತರು

ಕೋಟಾ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಆಪಾದಿತರಾದ ನೀವುಗಳು ಕಳ್ಳತನ ಮಾಡುವ ಸಮಾನ ಉದ್ದೇಶದಿಂದ ಒಟ್ಟಾಗಿ ತಮ್ಮ ಸ್ವಂತ ಲಾಭಕ್ಕೋಸ್ಕರ ದಿ.20/01/2025 ರಂದು ಬೆಳಗಿನ ಜಾವ ಸುಮಾರು 2.00 ಗಂಟೆಗೆ ಕೆಎ 20 ಹೆಚ್ ಡಿ 4985 ನೇ ಸ್ಪೆಂಡರ್ ಕಂಪೆನಿಯ ಮೋಟಾರು ಸೈಕಲಿನಲ್ಲಿ ಕುಂದಾಪುರ ತಾಲೂಕು, ಹೊಂಬಾಡಿ ಮಂಡಾಡಿ ಗ್ರಾಮದ, ಮಂಡಾಡಿಯಲ್ಲಿರುವ ಚಾ.ಸಾ.1 ನೇಯವರು ವಾಸವಿರುವ ಶ್ರೀ ದುರ್ಗಾ ಮನೆಯ ಬಳಿ ಬಂದು ಮನೆಯ ಎದುರು ಅಂಗಳದಲ್ಲಿ ಒಣಗಿಸಿದ್ದ ಸುಮಾರು ರೂ.80,000/- ಮೌಲ್ಯದ 76.4 ಕೆ.ಜಿ. ಅಡಿಕೆಯನ್ನು 4 ಚೀಲಗಳಲ್ಲಿ ತುಂಬಿಸಿಕೊಂಡು ಕಳವು ಮಾಡಿಕೊಂಡು ಸಾಗಾಟ ಮಾಡುತ್ತಿದ್ದಿರೆಂದೂ. ಆ ಮೂಲಕ ಆರೋಪಿತರಾದ ನೀವುಗಳು ಕಲಂ 303(2) ಬಿ.ಎನ್.ಎಸ್ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವುಗಳು ಕಳ್ಳತನ ಮಾಡುವ ಸಮಾನ ಉದ್ದೇಶದಿಂದ ಒಟ್ಟಾಗಿ ತಮ್ಮ ಸ್ವಂತ ಲಾಭಕ್ಕೋಸ್ಕರ ದಿ.20/01/2025 ರಂದು ಬೆಳಗಿನ ಜಾವ

ಸುಮಾರು 2.00 ಗಂಟೆಗೆ ಕಳವು ಮಾಡಿದ ಅಡಿಕೆ ಚೀಲಗಳನ್ನು ಮನೆಯ ಸಮೀಪ ಇರುವ ಹಾಡಿಯಲ್ಲಿ ಮುಚ್ಚಿ ಟ್ಟು ದಿ. 21.01.2025 ರಂದು ಬೆಳಿಗ್ಗೆ ಸುಮಾರು 8.00 ಗಂಟೆಗೆ ಸದ್ರಿ ಕಳವು ಮಾಡಿದ ಅಡಿಕೆ ತುಂಬಿರುವ 4 ಚೀಲಗಳನ್ನು ಚಾ.ಸಾ.10 ರವರ ಬಳಿ ತಮ್ಮ ಸ್ವಂತ ಅಡಿಕೆ ಎಂದು ಸುಳ್ಳು ಹೇಳಿ ಚಾ.ಸಾ.10 ನೇಯವರ ಬಾಬ್ತು ಕೆಎ 20 ಎಸಿ 0146 ನೇ ಮಹೀಂದ್ರ ಕಂಪೆನಿಯ ಜಿತೋ ಗೂಡ್ಸ ವಾಹನದಲ್ಲಿ ತುಂಬಿಸಿಕೊಂಡು ಯಡಾಡಿ ಮತ್ಯಾಡಿ ಗ್ರಾಮದ ಗಾವಳಿ ಕಕ್ಕುಂಜೆ ಕ್ರಾಸ್ ಬಳಿ ಇರುವ ಚಾ.ಸಾ.7 ರವರಿಗೆ ತಮ್ಮ ಮನೆಯ ಅಡಿಕೆಎಂದು ಹೇಳಿ ಮಾರಾಟ ಮಾಡಿ ಮೋಸ ಮಾಡುತ್ತಿದ್ದಿರೆಂದೂ. ಆ ಮೂಲಕ ಆರೋಪಿತರಾದ ನೀವುಗಳು ಕಲಂ 331(4) ಬಿ.ಎನ್.ಎಸ್ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕಃ 03-11-2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 865/2025**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕೋಟಾ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** ಃ 1. ದಿನೇಶ್ ಮೊಗವೀರ, ತಂದೆಃ ಮುತ್ತು ನಾಯ್ಕ,

**1. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**

ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಂದಾಪುರ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 865/2025**

**ಫಿರ್ಯಾದುದಾರರುಃ** ಸರಕಾರದ ಪರವಾಗಿ ಕೋಟಾ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** ಃ 2. **ಶ್ರೀಧರ,** ತಂದೆಃ ವೀರ,

**2. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**

ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಂದಾಪುರ.